

ಎಲೆಕ್ಟ್ರಾನಿಕ್ ತ್ಯಾಜ್ಯದ ಸುರಕ್ಷಿತ ವಿಲೇವಾರಿಗೆ ಸುಸ್ಥಿರವಾದ ವ್ಯವಸ್ಥೆ ಬೇಕಿದೆ ಎಂಬುದು ಅಸೋಚಾಂ ಪ್ರತಿನಿಧಿಗಳ ವಾದ. ನಗರದ ವಾರ್ಡ್‌ಗಳಲ್ಲಿ ಒಣತ್ಯಾಜ್ಯ ಸಂಗ್ರಹ ಘಟಕಗಳನ್ನು ತೆರೆಯಲಾಗುತ್ತಿದ್ದು, ಅಲ್ಲಿಯೇ ಇ–ತ್ಯಾಜ್ಯ ಸಂಗ್ರಹಕ್ಕೂ ವ್ಯವಸ್ಥೆ ಮಾಡಬೇಕು. ಮನೆ–ಮನೆಯಿಂದ ಹಸಿ, ಒಣ ಕಸ ಸಂಗ್ರಹಿಸುವಾಗ ಎಲೆಕ್ಟ್ರಾನಿಕ್ ತ್ಯಾಜ್ಯವನ್ನೂ ಶೇಖರಿಸಬೇಕು ಎಂದೂ ಅವರು ಹೇಳುತ್ತಾರೆ.

ಎಲೆಕ್ಟ್ರಾನಿಕ್ ಉಪಕರಣಗಳನ್ನು ಉತ್ಪಾದಿಸುವ ಕಂಪನಿಗಳು ಗ್ರಾಹಕರನ್ನು ತಲುಪಲು ವಿಶಾಲವಾದ ಜಾಲವನ್ನು ಹೊಂದಿದ್ದು, ಎಲೆಕ್ಟ್ರಾನಿಕ್ ಉಪಕರಣ ಮಾರಾಟ ಮಾಡುವ ಮಳಿಗೆಗಳ ಮೂಲಕ ತಯಾರಿಕಾ ಕಂಪನಿಗಳು ಇ–ತ್ಯಾಜ್ಯವನ್ನು ಸಂಗ್ರಹಿಸಬೇಕು ಎಂದು ಸಲಹೆ ನೀಡುತ್ತಾರೆ.

‘ಹೆಚ್ಚು ಸಂಖ್ಯೆಯಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸುವ ಸರ್ಕಾರಿ ಸಂಸ್ಥೆಗಳು, ಐಟಿ ಕಂಪನಿಗಳು ಹಾಗೂ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಕೇಂದ್ರಗಳಿಗೆ ಇ–ತ್ಯಾಜ್ಯವನ್ನು ಸಮರ್ಪಕ ರೀತಿಯಲ್ಲಿ ವಿಲೇವಾರಿ ಮಾಡಬೇಕು’

**ದೇಶದಲ್ಲಿ 10ರಿಂದ 14 ವರ್ಷ ವಯೋಮಿತಿಯ 4.5 ಲಕ್ಷ ಮಕ್ಕಳು ‘ಇ–ತ್ಯಾಜ್ಯ’ ಚಟುವಟಿಕೆಗಳಲ್ಲಿ ದುಡಿಯುತ್ತಿದ್ದಾರೆ.**

ಒಟ್ಟುಗೂಡಿಸಿಕೊಂಡಿದ್ದರೆ, ಸಂಸ್ಥೆಯ ಮೊಬೈಲ್ ವಾಹನವೊಂದು ಅಲ್ಲಿಗೆ ತೆರಳಿ ವಸ್ತುಗಳನ್ನು ಪಡೆಯಲಿದೆ.

‘12 ತಿಂಗಳಲ್ಲಿ 5 ಟನ್ ಇ ತ್ಯಾಜ್ಯ ಸಂಗ್ರಹಿಸಲಾಗಿದೆ. 306 ಕೆ.ಜಿ. ಲೋಹವನ್ನು ಇದರಿಂದ ಬೇರ್ಪಡಿಸಲಾಗಿದೆ. 26.34 ಕೆ.ಜಿ.ಯಷ್ಟು ವಿಷ ಭೂಮಿಗೆ ಸೇರುವುದನ್ನು ತಪ್ಪಿಸಲಾಗಿದೆ. ಇ ತ್ಯಾಜ್ಯವನ್ನು ಪುನರ್ಬಳಕೆ ಮಾಡುವ ಸಂಸ್ಥೆಗೆ ಇವುಗಳನ್ನು ರವಾನಿಸಲಾಗಿದೆ’ ಎಂದು ಎನ್‌ಸೈಡ್ ಸಂಸ್ಥೆಯ ಸಿಇಒ ಮನ್ವೇಲ್ ಆಲೂರ್ ಹೇಳುತ್ತಾರೆ.

ಬೆಂಗಳೂರು ನಗರದಲ್ಲಿ ಕೆಲವೇ ಕೆಲವು ಇ–ತ್ಯಾಜ್ಯ ಮರುಬಳಕೆ ಕೇಂದ್ರಗಳಿವೆ. ಆದರೆ, ತ್ಯಾಜ್ಯ ಉತ್ಪಾದಕರು ಮತ್ತು ಮರುಬಳಕೆ ಮಾಡುವವರ ನಡುವೆ ದೊಡ್ಡದೊಂದು ಅಂತರ ಇದೆ. ವಿವಿಧ ರೀತಿಯಲ್ಲಿ ಇ–ತ್ಯಾಜ್ಯ ಸಂಗ್ರಹಣೆಗೆ ಪ್ರಯತ್ನಿಸುತ್ತಿರುವುದು ಉತ್ತಮ ಬೆಳವಣಿಗೆ ಎಂಬುದು ಬಿಬಿಎಂಪಿ ಜಂಟಿ ಆಯುಕ್ತ (ಘನತ್ಯಾಜ್ಯ ನಿರ್ವಹಣೆ) ಸರ್ಫರಾಜ್ ಖಾನ್ ಅವರ ಅಭಿಪ್ರಾಯ.

‘ನಮ್ಮ ಪರಿಸರದಲ್ಲಿ ಮೂಲದಲ್ಲೇ ತ್ಯಾಜ್ಯ ಬೇರ್ಪಡಿಸುವಿಕೆ ಯಶಸ್ವಿಯಾಗಿ ನಡೆಯುತ್ತಿದೆ. ಆದರೆ, ಬಿಬಿಎಂಪಿಯು ಇ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸದ ಕಾರಣ, ಅವು ಒಣ ತ್ಯಾಜ್ಯದೊಂದಿಗೆ ಬೆರೆಯುತ್ತಿತ್ತು. ಇದೀಗ ಇ ತ್ಯಾಜ್ಯ ಭೂಮಿ ಸೇರುವುದನ್ನು ತಡೆಗಟ್ಟುವಂತಾಗಿದೆ’ ಎಂದು ಬಿಎಂ ಕಾವಲ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯೆ ರಾಹಿ ಸಂತಾನಮ್ ಹೇಳುತ್ತಾರೆ.

ಈ ನಿಟ್ಟಿನಲ್ಲಿ ಸ್ಥಳೀಯ ನಿವಾಸಿಗಳಲ್ಲೂ ಹೊಸ ಎಚ್ಚರ ಮೂಡಿದೆ ಎನ್ನುವುದು ಗಮನಿಸಬೇಕಾದ ಸಂಗತಿ. ‘ನಮ್ಮ ಮನೆಗಳಲ್ಲಿ ಹಳೆಯದಾದ ರಿಮೋಟ್, ಎಲೆಕ್ಟ್ರಿಕ್ ವೈರ್, ಸೊಳ್ಳೆ ಮಷಿನ್‌ಗಳು ಹೀಗೆ ಸಣ್ಣ ಪುಟ್ಟ ಇ–ತ್ಯಾಜ್ಯವನ್ನು ಕಸದೊಂದಿಗೆ ಎಸೆಯುತ್ತಿದ್ದೆವು. ಅದು ಅಪಾಯಕಾರಿ ಎಂದು ಗೊತ್ತಿದ್ದರೂ ಬೇರೆ ದಾರಿಯಿಲ್ಲದೆ ಹಾಗೆ ಮಾಡುತ್ತಿದ್ದೇವೆ. ಪ್ರತ್ಯೇಕ ಸಂಗ್ರಹಣೆ ವ್ಯವಸ್ಥೆ ಮಾಡಿರುವುದು ಸಹಾಯಕವಾಗಿದೆ’ ಎಂದು ಜಯನಗರದ ನಿವಾಸಿ ರಾಜಶೇಖರ ಮೂರ್ತಿ ತಿಳಿಸುತ್ತಾರೆ.

ಬೆಂಗಳೂರು ದಕ್ಷಿಣ ಭಾಗದ ಜನರು ಇ–ತ್ಯಾಜ್ಯದ ವಿಲೇವಾರಿಗೆ 73497–37586 ಸಂಖ್ಯೆಗೆ ಕರೆ ಮಾಡಿದರೆ ಸಂಸ್ಥೆಯ ವಾಹನವೇ ಅವರ ಮನೆಗೆ ಬಂದು ಅವುಗಳನ್ನು ಸಂಗ್ರಹಿಸಿ ಕೊಂಡೊಯ್ಯುತ್ತದೆ. ಹೆಚ್ಚಿನ ಮಾಹಿತಿ ಅಗತ್ಯವಿದ್ದರೆ www.saahas.org ವೆಬ್‌ಸೈಟ್ ಗೆ ಸಂಪರ್ಕಿಸಬಹುದು.

ಬೆಂಗಳೂರು ದಕ್ಷಿಣದಲ್ಲಿ ಯಶಸ್ವಿ ಆಗುತ್ತಿರುವ ಈ ಯೋಜನೆ ನಗರದ ಇತರ ಭಾಗಗಳಿಗೂ ವಿಸ್ತರಣೆ ಆಗಬೇಕಿದೆ. ಮಾತ್ರವಲ್ಲ ರಾಜ್ಯದ ಎಲ್ಲ ನಗರಗಳಲ್ಲೂ ಇಂತಹ ಪ್ರಯತ್ನಗಳು ನಡೆಯಬೇಕಿದೆ.



